**ಶ್ರೀ ಕಿಮ್ಮನೆ ರತ್ನಾಕರ್:** ಮಾನ್ಯ ಪೂಜಾರಿಯವರೆ, ತಾವೇ ಅಧ್ಯಕ್ಷರಿದ್ದೀರಿ. Division ಬೇಕಾದರೆ ನೀವೇ ಮಾಡಿಸಿ.

**ಅಧ್ಯಕ್ಷರು:** ಮಾನ್ಯ ಪೂಜಾರಿಯವರೆ, ಮಾಯ ಮಾಡುವುದಕ್ಕೆ ಆಗುವುದಿಲ್ಲ. ಕಟ್ಟಬೇಕು. ಅದಕ್ಕೆ time ಹಿಡಿಯುತ್ತದೆ.

**(2059), ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಧಲಿಂಗಪ್ಪ (ಶಿರಹಟ್ಟಿ)**

**ಅ)** ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಮುಂಡರಗಿ ನಗರದಲ್ಲಿ ಸರಕಾರಿ ಪ್ರೌಢಶಾಲೆ ಇಲ್ಲದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

**ಇ)** ಹೊಸ ಸರ್ಕಾರಿ ಪ್ರೌಢ ಶಾಲೆಯನ್ನು ಯಾವ ಅವಧಿಯೊಳಗಾಗಿ ಪ್ರಾರಂಭಿಸಲಾಗುವುದು;

**ಈ)** ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಅನೇಕ ಶಾಲೆಗಳು ಅತ್ಯಂತ ಹಳೆಯ ಕಟ್ಟಡಗಳಿದ್ದು ಶಿಥಿಲಾವಸ್ಥೆಯಲ್ಲಿರುವ ಇವುಗಳು ಬೀಳುವ ಸ್ಥಿತಿಯಲ್ಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಉ)** ಇಂತಹ ಶಾಲೆಗಳ ದುರಸ್ತಿ ಕಾರ್ಯದ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

**ಊ)** ಯಾವ ಅವಧಿಯೊಳಗಾಗಿ ಈ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಲಾಗುವುದು;

**ಋ)** ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿಗಾಗಿ ಮೀಸಲಿಟ್ಟಿರುವ ಅನುದಾನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)**

**ಅ)** ಬಂದಿದೆ.

**ಆ)** ಪ್ರಸ್ತಾವನೆ ಪರಿಶೀಲಿಸಲಾಗುತ್ತಿದ್ದು ಶಿರಹಟ್ಟಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢ ಶಾಲೆ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ.

**ಇ)** 2014–15ನೇ ಸಾಲಿನಲ್ಲಿ ಮಂಜೂರಾತಿ ನೀಡುವ ಉದ್ದೇಶ ಹೊಂದಿದೆ.

**ಈ)** ಹೌದು.

ಈ ಕಟ್ಟಡಗಳು ಬಳಸಲು ಯೋಗ್ಯವಾಗಿರದೇ ನೆಲಸಮ ಮಾಡಿ ತರಗತಿ ಕೊಠಡಿಗಳ ಅವಶ್ಯಕತೆ ಆಧರಿಸಿ ಕೊಠಡಿಗಳನ್ನು ನಿರ್ಮಿಸಬೇಕಾಗಿರುತ್ತದೆ. 2014–15ನೇ ಸಾಲಿಗೆ ಶಿಥಿಲಗೊಂಡ ಕಟ್ಟಡಗಳ ದುರಸ್ಥಿಗೆ ಮಂಜೂರಾತಿ ದೊರೆತಿಲ್ಲ. ಆದರೆ ದುರಸ್ಥಿ ನಂತರ ಬಳಸುವ ಸ್ಥಿತಿಯಲ್ಲಿರುವ 480 ಪ್ರಾಥಮಿಕ ಶಾಲೆಗಳಿಗೆ ದುರಸ್ಥಿಗಾಗಿ ಮಂಜೂರಾತಿ ದೊರೆತಿದೆ. ಇವುಗಳನ್ನು ಎಸ್.ಡಿ.ಎಂ.ಸಿ. ಮುಖಾಂತರ ದುರಸ್ಥಿ ಮಾಡಲಾಗುವುದು.

**ಉ)** ಇಂತಹ ಶಾಲೆಗಳ ದುರಸ್ಥಿಗಾಗಿ ಹಾಗೂ ಬೇಡಿಕೆಯನ್ನು ಗಮನಿಸಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಲು ` 147.00 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಅನುದಾನ ಒದಗಿಸಿದ ತಕ್ಷಣ ಆದ್ಯತೆಯ ಮೇರೆಗೆ ಕ್ರಮಕ್ಕೈಗೊಳ್ಳಲಾಗುವುದು.

**ಊ)** 2014–15ನೇ ಸಾಲಿನಲ್ಲಿ ಅನುದಾನ ದೊರೆತ ಶಾಲೆಗಳಿಗೆ ಶೀಘ್ರವಾಗಿ ಹಾಗೂ ಅನುದಾನ ಇಲ್ಲದ ಶಾಲೆಗಳಿಗೆ ಅನುದಾನ ದೊರೆತ ನಂತರ ದುರಸ್ಥಿ ಮಾಡಲಾಗುವುದು.

ಖ) ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ಥಿಗಾಗಿ ಮೀಸಲಿಟ್ಟಿರುವ ಅನುದಾನವನ್ನು ಅಗತ್ಯತೆ ಅನುಸಾರ ಪರಿಶೀಲಿಸಿ ಹೆಚ್ಚಿಸಲು ಕ್ರಮವಹಿಸಲಾಗುವುದು.

**ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಧಲಿಂಗಪ್ಪ:** ಮಾನ್ಯ ಅಧ್ಯಕ್ಷರೆ, ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಮುಂಡರಗಿ ನಗರವು ಸುಮಾರು 30,000ಕ್ಕೂ ಹೆಚ್ಚು ಜನಸಂಖ್ಯೆಯಿದ್ದು, ಈವರೆಗೂ ಕೂಡ ಸರ್ಕಾರಿ ಪ್ರೌಢಶಾಲೆ ಇರುವುದಿಲ್ಲ. ಬಡತನ ರೇಖೆಗಿಂತ ಕೆಳಗಿರತಕ್ಕಂಥ ಅಲ್ಲಿಯ ಮಕ್ಕಳು 10 ಕಿ.ಮೀ. ಬೇರೆ ಹಳ್ಳಿಗೆ ಹೋಗಿ ಕಲಿಯತಕ್ಕ ವ್ಯವಸ್ಥೆ ಇದೆ. ಇಲ್ಲಿಯವರೆಗೂ ಹೋದ ಬಾರಿನೂ ಈ ಪ್ರಶ್ನೆಯನ್ನು ನಾನು ಕೇಳಿದ್ದೆ. ಆ ನಗರದಲ್ಲಿ ಸರ್ಕಾರಿ ಪ್ರೌಢಶಾಲೆ ಮಂಜೂರು ಇಲ್ಲ.

**ಶ್ರೀ ಕಿಮ್ಮನೆ ರತ್ನಾಕರ್:** ಮಾನ್ಯ ಅಧ್ಯಕ್ಷರೆ, ಮುಂಡರಗಿ ನಗರದಲ್ಲಿ ಪ್ರೌಢ ಶಾಲೆಯನ್ನು ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಪ್ರೌಢ ಶಾಲೆಯನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇಲಾಖೆಯಿಂದ ಅನುಮತಿ ಬರಬೇಕಾಗಿದೆ. ಅದನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಧಲಿಂಗಪ್ಪ:** ಮಾನ್ಯ ಅಧ್ಯಕ್ಷರೆ, ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಶಿಥಿಲಾವಸ್ಥೆಯಲ್ಲಿರುವ ಅನೇಕ ಶಾಲೆಗಳ ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ.

**ಅಧ್ಯಕ್ಷರು:** ತಾವು ಪ್ರಶ್ನೆಯನ್ನು ಕೇಳುವಾಗ ಆ ಪ್ರಶ್ನೆಯ ಗುಣ ಏನು ಎನ್ನುವುದನ್ನು ತಿಳಿದುಕೊಳ್ಳಿ. ಕಟ್ಟಡ ಕೇಳಿದ್ದೀರಿ. ನಂತರ ರಿಪೇರಿ ಎಂದು ಕೇಳುತ್ತೀರಿ. ಬೇರೆ ಬೇರೆ ಪ್ರಶ್ನೆ ಕೇಳಬೇಕು.

**ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಧಲಿಂಗಪ್ಪ:** ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂದಪಟ್ಟಂತೆ ಕೇಳುತ್ತಿದ್ದೇನೆ. ಶಾಲೆಗಳ ಕಟ್ಟಡಗಳ ದುರಸ್ತಿಯನ್ನು ಎಷ್ಟು ದಿವಸದೊಳಗೆ ಮಾಡುತ್ತಾರೆ?

**ಅಧ್ಯಕ್ಷರು:** ಯಾವ ಯಾವ ಶಾಲೆಗಳು? ಹೇಳಿ.

**ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ಧಲಿಂಗಪ್ಪ:** ಮಾನ್ಯ ಅಧ್ಯಕ್ಷರೆ, ಸುಮಾರು 20 ಶಾಲೆಗಳಿವೆ.

**ಅಧ್ಯಕ್ಷರು:** ಅವುಗಳನ್ನು ಅವರು ಎಲ್ಲಿ ಹುಡುಕುವುದಕ್ಕೆ ಹೋಗಬೇಕು? ಮಾನ್ಯ ಸಚಿವರೆ, ರಿಪೇರಿಗೆ ಹಣ ಕೊಡಿ.

(ಗೊಂದಲ)

**ಶ್ರೀ ಕಿಮ್ಮನೆ ರತ್ನಾಕರ್:** ಮಾನ್ಯ ಅಧ್ಯಕ್ಷರೆ, ಅವರಿಗೆ 40 ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದೇನೆ. ಅವರು ಏನು ಪಟ್ಟಿ ಕೊಡುತ್ತಾರೆ ಅದರಂತೆ ನಾನು ಮಂಜೂರು ಮಾಡುತ್ತೇನೆ. ಅವರು ಕೊಟ್ಟಿರುವುದನ್ನು ಅಪ್ರೂವ್ ಮಾಡುತ್ತೇವೆ.

**(2564), ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ.**

ಅ) ಕಳೆದ 3 ವರ್ಷಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವತಿಯಿಂದ ಅನುಷ್ಠಾನಗೊಳಿಸಿರುವ ಯೋಜನೆಗಳು ಯಾವುವು (ವಿವರ ಒದಗಿಸುವುದು);

ಆ) ಈ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ನಿಗದಿಪಡಿಸಿರುವ ಮತ್ತು ಖರ್ಚು ಮಾಡಿರುವ ಅನುದಾನದ ಮೊತ್ತ ಎಷ್ಟು;

ಇ) ಈ ಯೋಜನೆಗಳನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗಿದೆಯೇ (ವಿವರ ಒದಗಿಸುವುದು);

ಈ) ಯೋಜನೆಗಳು ಪೂರ್ಣಗೊಳ್ಳದಿದ್ದಲ್ಲಿ, ಕಾರಣಗಳೇನು (ವಿವರ ಒದಗಿಸುವುದು)